ನಮೂನೆ 2ಎ

(ನಿಯಮ 5ಇ(3))

ಚುನಾವಣಾ ನೋಟೀಸು

ದಿನಾಂಕ: 25-01-2026 ರಂದು **ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ನಿ., ಗಂಗೊಳ್ಳಿ, ಕುಂದಾಪುರ ತಾಲೂಕು** ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ನಡೆಯುವ ಚುನಾವಣೆಯನ್ನು ಸರಸ್ವತಿ ವಿದ್ಯಾಲಯ,ಪದವಿ ಪೂರ್ವ ಕಾಲೇಜು ಗಂಗೊಳ್ಳಿ ಇಲ್ಲಿ ಪೂರ್ವಾಹ್ನ 9.00 ಗಂಟೆಯಿಂದ ಅಪರಾಹ್ನ 4.00 ಗಂಟೆಯವರೆಗೆ ನಡೆಸುವ ಬಗ್ಗೆ ಚುನಾವಣಾ ವೇಳಾಪಟ್ಟಿಯು ಈ ಕೆಳಕಂಡಂತೆ ಇರತಕ್ಕದ್ದೆಂದು ನೋಟೀಸು ನೀಡಿದೆ.

**ಚುನಾವಣಾ ವೇಳಾ ಪಟ್ಟಿ**

| ಕ್ರ.ಸಂ | ಆಯ್ಕೆಯಾಗಬೇಕಾದ ಸ್ಥಾನಗಳು | : | ಸ್ಥಾನಗಳ ಸಂಖ್ಯೆ |
|---|---|---|---|
| 1 | ಸಾಮಾನ್ಯ | : | 07 |
| 2 | ಮಹಿಳಾ ಮೀಸಲು | : | 02 |
| 3 | ಪ.ಜಾತಿ ಮೀಸಲು | : | 01 |
| 4 | ಪ.ಪಂಗಡ ಮೀಸಲು | : | 01 |
| 5 | ಹಿಂದುಳಿದ ವರ್ಗ (ಪ್ರವರ್ಗ-ಎ) ಮೀಸಲು | : | 01 |
| 6 | ಹಿಂದುಳಿದ ವರ್ಗ (ಪ್ರವರ್ಗ-ಬಿ) ಮೀಸಲು | : | 01 |
| 7 | ಪಧವೀಧರ ಕ್ಷೇತ್ರ | : | 02 |
| | ಒಟ್ಟು | : | 15 |

| ಕ್ರ.ಸ | ಸೌಹಾರ್ದ ಸಹಕಾರಿ ನಿಯಮ | ವಿವರಗಳು | ದಿನಾಂಕ ಮತ್ತು ಸಮಯ | ನಿಯುಕ್ತಿಗೊಳಿಸಲಾದ ಅಧಿಕಾರಿ ಹಾಗೂ ಸ್ಥಳ |
|---|---|---|---|---|
| 1 | – | ಸ್ಪರ್ಧಿಸಲು ಇಚ್ಚಿಸುವ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ: 11-01-2026 ರಂದು ಬೆಳಿಗ್ಗೆ 10-00 ರಿಂದ ಅಪರಾಹ್ನ 2-00 ಗಂಟೆಯವರೆಗೆ | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ |
| 2 | 5ಇ | ಉಮೇದ್ವಾರರು ಸ್ವತಃ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 17-01-2026 ರಂದು ಬೆಳಿಗ್ಗೆ 10-00 ರಿಂದ ಅಪರಾಹ್ನ 2-00 ಗಂಟೆಯವರೆಗೆ | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ |
| 3 | 5ಜಿ | ನಾಮ ಪತ್ರಗಳ ಪರಿಶೀಲನಾ ದಿನಾಂಕ, ಸಮಯ ಮತ್ತು ಸ್ಥಳ | ದಿನಾಂಕ: 18-01-2026ರಂದು ಪೂರ್ವಾಹ್ನ 11.00 ಗಂಟೆಗೆ | ರಿಟರ್ನಿಂಗ್ ಅಧಿಕಾರಿಯವರಿಂದ ಸಂಘದ ಕಚೇರಿಯಲ್ಲಿ |
| 4 | 5ಐ | ಅರ್ಹ ಉಮೇದುವಾರರ ನಾಮ ಪತ್ರಗಳ ಪಟ್ಟಿ ಪ್ರಕಟಣೆಯ ದಿನಾಂಕ ಮತ್ತು ಸಮಯ | ದಿನಾಂಕ 18-01-2026 ರಂದು ನಾಮ ಪತ್ರಗಳ ಪರಿಶೀಲನೆಯ ನಂತರ | ರಿಟರ್ನಿಂಗ್ ಅಧಿಕಾರಿ ಯವರಿಂದ ಸಂಘದ ಕಚೇರಿಯ ಸೂಚನಾ ಫಲಕದಲ್ಲಿ |
| 5 | 5ಹೆಚ್ | ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ ಮತ್ತು ಸಲ್ಲಿಸಬೇಕಾದ ಅಧಿಕಾರಿ | ದಿನಾಂಕ : 19-01-2026ರಂದು 3-00 ಗಂಟೆಯ ಒಳಗೆ | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ |
| 6 | 5ಐ | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ದಿನಾಂಕ ಮತ್ತು ಸಮಯ | ದಿನಾಂಕ : 19-01-2026 ರಂದು 3-00 ಗಂಟೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಸಂಘದ ಕಚೇರಿಯಲ್ಲಿ |
| 7 | 5ಜೆ | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ನೀಡುವುದು | ದಿನಾಂಕ: 19-01-2026 ರಂದು 4.30 ಗಂಟೆಗೆ | ರಿಟರ್ನಿಂಗ್ ಅಧಿಕಾರಿಯವರಿಂದ ಸಂಘದ ಸೂಚನಾ ಫಲಕದಲ್ಲಿ |
| 8 | – | ಚುನಾವಣೆ ನಡೆಯುವ ದಿನಾಂಕ ಮತ್ತು ಸಮಯ, ಸ್ಥಳ | ದಿನಾಂಕ : 25-01-2026 ರಂದು ಪೂರ್ವಾಹ್ನ 9-00 ಗಂಟೆಯಿಂದ ಅಪರಾಹ್ನ 4-00 ತನಕ | ರಿಟರ್ನಿಂಗ್ ಅಧಿಕಾರಿಯಿಂದ **ಸರಸ್ವತಿ ವಿದ್ಯಾಲಯ,ಪದವಿ ಪೂರ್ವ ಕಾಲೇಜು ಗಂಗೊಳ್ಳಿ** |
| 9 | 5ಎಸಿ | ಮತ ಎಣಿಕೆ | ದಿ: 25-01-2026 ರಂದು | ಮತದಾನ ಮುಗಿದ ನಂತರ |
| 10 | 5ಎಡಿ | ಚುನಾವಣಾ ಫಲಿತಾಂಶ ಪ್ರಕಟಿಸುವ ದಿನಾಂಕ ಮತ್ತು ಸಮಯ | ದಿ: 25-01-2026 ರಂದು | ಮತಗಳ ಎಣಿಕೆ ಮುಗಿದ ನಂತರ |

___2

## ಸೂಚನೆಗಳು :-

1) ನಾಮಪತ್ರಗಳನ್ನು ಸ್ವತಃ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಂದ ಪಡೆದು ವೇಳಾ ಪಟ್ಟಿಯ ಪ್ರಕಾರ ದಿನಾಂಕ: 11-01-2026 ರಿಂದ ದಿನಾಂಕ: 17-01-2026 ರವರೆಗೆ ಸಮಯ ಪೂರ್ವಹ್ನ 10-00 ಗಂಟೆಯಿಂದ ಅಪರಾಹ್ನ 2.00 ಗಂಟೆಯವರೆಗೆ ರಿಟರ್ನಿಂಗ್ ಅಧಿಕಾರಿಯವರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ತಲುಪಿಸತಕ್ಕದ್ದು.

2) ನಾಮಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ ಉಮೇದುವಾರರು ಹಾಜರಿರಬಹುದು.

3) ನಾಮಪತ್ರ ಸಲ್ಲಿಸುವ ಸದಸ್ಯರು ಪ.ಜಾತಿ/ಪ.ಪಂಗಡ/ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ 1000/- ಮತ್ತು ಸಾಮಾನ್ಯ ಸದಸ್ಯರು, ಸಾಮಾನ್ಯ ಸ್ಥಾನಕ್ಕೆ 2000/-ಚುನಾವಣಾ ಠೇವಣೆಯನ್ನು ಸಂಘಕ್ಕೆ ಪಾವತಿಸಿ ರಶೀದಿ ಪಡೆದು ನಾಮಪತ್ರಕ್ಕೆ ಲಗತ್ತಿಸಬೇಕು.

4) ನಾಮಪತ್ರ/ನಾಮನಿರ್ದೇಶನ ಪತ್ರಗಳಿಗೆ ಮತ ಚಲಾಯಿಸಲು ಅರ್ಹತೆಯಿರುವ ಓರ್ವ ಸದಸ್ಯರು ಓರ್ವ ಅಭ್ಯರ್ಥಿಗೆ ಮಾತ್ರ ನಾಮಪತ್ರದಲ್ಲಿ ಸಹಿ ಮಾಡುವ ಮೂಲಕ ಸೂಚಿಸತಕ್ಕದ್ದು. ಸದಸ್ಯರು ಪುನಃ ಬೇರೊಬ್ಬ ಅಭ್ಯರ್ಥಿಗೆ ಸೂಚನೆ ಮಾಡಲು ಬರುವುದಿಲ್ಲ.

5) ನಾಮಪತ್ರಗಳನ್ನು ಹಿಂದಕ್ಕೆ ಪಡೆಯುವ ಅರ್ಜಿಗಳನ್ನು ಸಂಘದ ರಿಟರ್ನಿಂಗ್ ಅಧಿಕಾರಿಯವರಿಗೆ ನೀಡುವುದು.

6) ಸಂಘದ ಪ್ರತಿಯೊಬ್ಬ ಅರ್ಹ ಸದಸ್ಯನು ಭಾವಚಿತ್ರವುಳ್ಳ ಅಧಿಕೃತ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು ಹಾಗೂ ಮತದಾನದ ಸಮಯದಲ್ಲಿ ಗುರುತಿನ ಚೀಟಿಯನ್ನು ಹಾಜರುಪಡಿಸದೆ ಇದ್ದಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ.

7) ಉಮೇದ್ವಾರರು ತಮ್ಮ ನಾಮಪತ್ರಗಳನ್ನು ಸಮರ್ಪಕವಾಗಿ ಭರ್ತಿಗೊಳಿಸತಕ್ಕದ್ದು ಹಾಗೂ ತಾವು ಸ್ಪರ್ಧಿಸುವ ಸ್ಥಾನಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ.

8) ಚುನಾವಣಾ ಆಯೋಗವು ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳಿಗೆ ನೀಡಿರುವ ಚಿಹ್ನೆಗಳನ್ನು ಹೊರತುಪಡಿಸಿ ಮುಕ್ತ ಚಿಹ್ನೆಗಳನ್ನು ಮಾತ್ರ ಪಡೆಯಬಹುದು. ವಿವರಗಳನ್ನು ಕೇಂದ್ರ ಕಛೇರಿಯ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಚಿಹ್ನೆಗಳನ್ನು ನೀಡುವ ಅಂತಿಮ ಅಧಿಕಾರ ರಿಟರ್ನಿಂಗ್ ಅಧಿಕಾರಿಯವರದ್ದಾಗಿರುತ್ತದೆ.

09) ಸೌಹಾರ್ದ ಸಹಕಾರಿ ನಿಯಮ 5(ಹೆಚ್)(3)(1)ರಂತೆ ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಸಲ್ಲಿಸಿರುವ ಸೂಚನೆ/ಅರ್ಜಿಗಳನ್ನು ಪುನಃ ಹಿಂದಕ್ಕೆ ಪಡೆಯಲು ಅವಕಾಶವಿರುವುದಿಲ್ಲ.

10) ಸೌಹಾರ್ದ ಸಹಕಾರಿ ನಿಯಮ 5(ಹೆಚ್)(1)ರಂತೆ ನಾಮಪತ್ರಗಳನ್ನು ವಾಪಾಸು ಪಡೆಯುವಾಗ ಸದಸ್ಯರು ಖುದ್ದಾಗಿ ಹಾಜರಾಗಿ ಲಿಖಿತ ಅರ್ಜಿಯನ್ನು ಬರೆದು ಸಹಿ ಮಾಡಿ ಸಲ್ಲಿಸತಕ್ಕದ್ದು.

11) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ಧಿಸಲು ಬಯಸುವ ಉಮೇದ್ವಾರರು ತಮ್ಮ ಜಾತಿಯ ಬಗ್ಗೆ ದೃಢೀಕರಣವನ್ನು ನಾಮಪತ್ರದೊಂದಿಗೆ ಲಗ್ತೀಕರಿಸಬೇಕು.

12) ಪದವೀಧರ ಸ್ಥಾನಕ್ಕೆ ಸ್ಪರ್ಧಿಸಲು ಬಯಸುವ ಉಮೇದ್ವಾರರು ಪದವಿ ಪ್ರಮಾಣಪತ್ರವನ್ನು ನಾಮಪತ್ರದೊಂದಿಗೆ ಲಗ್ತೀಕರಿಸಬೇಕು.

13) ನಾಮಪತ್ರ ಸಲ್ಲಿಸುವ ಅಭ್ಯರ್ಥಿಗಳು ಎರಡು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳನ್ನು ನೀಡುವುದು.

ಸಹಿ/
(ಸುನೀಲ್ ಕುಮಾರ್ ಸಿ.ಎಮ್)
ಸಹಕಾರ ಅಭಿವೃದ್ಧಿ ಅಧಿಕಾರಿ / ರಿಟರ್ನಿಂಗ್ ಆಫೀಸರ್
ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ನಿ., ಗಂಗೊಳ್ಳಿ,
ಕುಂದಾಪುರ ತಾಲೂಕು

ಸ್ಥಳ : ಗಂಗೊಳ್ಳಿ
ದಿನಾಂಕ :05-01-2026